ಸರ್ದಾರ್‌ರವರು, ಪಟೇಲ್ ಪಾಪಾ ನಾಯಕ್ ಅವರು, ಟಿ.ಡಿ. ಮಾರಣ್ಣನವರು, ನಂಜಪ್ಪನವರು ನಿಧನರಾಗಿದ್ದಾರೆ ಅವರ ಸಲುವಾಗಿ ಶೋಕ ಪ್ರಸ್ತಾವನೆಯನ್ನು ನಾವು ಈ ಸಭೆಯಲ್ಲಿ ಪಾಸ್ ಮಾಡಿದ ಮೇಲೆ ಮಂದಿನ ಸಭೆಯ ಕಾರ್ಯಕಲಾಪಗಳ ಬಗ್ಗೆ ಚರ್ಚೆ ಮಾಡಬಹುದು ಇದು ನಮ್ಮ ಕರ್ತವ್ಯವಾಗಿರುತ್ತದೆ ಸಭೆಯ ಕಾರ್ಯಕಲಾಪಕ್ಕೆ ಮೊದಲು ಸಂತಾಪ ಸೂಚನೆಯನ್ನು ಅಧ್ಯಕ್ಷರೇ ಪುಂಡಿಸಿದರೆ ಅದಕ್ಕೆ ನಾವೆಲ್ಲರೂ ಒಪ್ಪಿಗೆ ನೀಡಿ ಸಂತಾಪ ಸೂಚಕ ನಿರ್ಣಯವನ್ನು ಪಾಸ್ ಮಾಡೋಣ ಆದಾದ ಮೇಲೆ ಕಾವೇರಿ ನೀರಿನ ಬಗ್ಗೆ ಚರ್ಚೆ ತೆಗೆದುಕೊಳ್ಳಬೇಕೇ ಮತ್ತೊಂದು ತೆಗೆದುಕೊಳ್ಳಬೇಕೇ ಎಂಬುದು ಸಭಾಧ್ಯಕ್ಷರಿಗೆ ಬಿಟ್ಟದ್ದು ದಂ.

ಸಂತಾಪ ಸೂಚಕ ನಿರ್ಣಯ

ಅಧ್ಯಕ್ಷರು. —

೧. ಲೋಕಸಭೆಯ ಮಾಜಿ ಅಧ್ಯಕ್ಷರಾಗಿದ್ದ ಶ್ರೀ ಕೆ.ಎಸ್. ಹೆಗ್ಡೆಯವರು ದಿನಾಂಕ ೨೫ನೇ ಮೇ ೧೯೯೦ ರಂದು ನಿಧನರಾದರೆಂದು ಸದನಕ್ಕೆ ತಿಳಿಸಲು ವಿಷಾಧಿಸುತ್ತೇನೆ. ಪೂಜ್ಯರು ೧೯೭೨ ರಿಂದ ೧೯೮೦ ರವರೆಗೆ ಲೋಕಸಭೆಯ ಸದಸ್ಯರು ಹಾಗೂ ಅಧ್ಯಕ್ಷರಾಗಿದ್ದರು. ೧೯೫೬ರಲ್ಲಿ ರಾಜ್ಯಸಭೆಯ ಸದಸ್ಯರಾಗಿದ್ದರಂ ಅವರು ಮೈಸೂರು ಹೈಕೋರ್ಟ್ ಹಾಗೂ ಸುಪ್ರೀಮ್ ಕೋರ್ಟ್‌ಗಳಲ್ಲಿ ನ್ಯಾಯಾಧೀಶರಾಗಿ ಹಾಗೂ ದೆಹಲಿ ಹೈಕೋರ್ಟಿನ ಮಂಖ್ಯ ನ್ಯಾಯಾಧೀಶರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

೨ ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಮಾಣಿಕ್‌ರಾವ್ ಪಾಟೀಲ್‌ರವರು ದಿನಾಂಕ ೧೪ನೇ ಮೇ, ೧೯೯೦ ರಂದು ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇನೆ ಶ್ರೀಯುತರು ನಾಲ್ಕು ಆರು ಹಾಗೂ ಏಳನೇ ವಿಧಾನ ಸಭೆಯ ಸದಸ್ಯರಾಗಿದ್ದರು ಅವರು ಗೃಹ ಖಾತೆಯ ಉಪ ಸಚಿವರಾಗಿ ಹಾಗೂ ಆಹಾರ ಖಾತೆಯ ಸಚಿವರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

೩. ವಿಧಾನ ಸಭೆಯ ಮಾಜಿ ಸದಸ್ಯರಾದ ಡಾ. ಸಂಗಮೇಶ್ವರ ಸರದಾರ ಅವರು ದಿನಾಂಕ ೨೦ನೇ ಏಪ್ರಿಲ್, ೧೯೯೦ ರಂದು ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇನೆ. ಶ್ರೀಯುತರು ಏಳನೇ ವಿಧಾನ ಸಭೆಯ ಸದಸ್ಯರಾಗಿದ್ದರು ಹಾಗೂ ಆರೋಗ್ಯ ರಾಜ್ಯ ಸಚಿವರಾಗಿದ್ದರು ವೃತ್ತಿಯಿಂದ ವೈದ್ಯರಾಗಿದ್ದು ಅನೇಕ ರಾಜ್ಯ, ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಪುರಸ್ಕಾರಗಳನ್ನು ಪಡೆದಿರುತ್ತಾರೆ.

೪. ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಪಟೇಲ್ ಪಾಪಾ ನಾಯಕ್‌ರವರು ದಿನಾಂಕ ೨೭ನೇ ಏಪ್ರಿಲ್ ೧೯೯೦ ರಂದು ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇನೆ. ಶ್ರೀಯುತರು ಐದು ಹಾಗೂ ಆರನೇ ವಿಧಾನ ಸಭೆಯ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

೫. ವಿಧಾನ ಸಭೆಯ ಮಾಜಿ ಸದಸ್ಯರಾಗಿದ್ದ ಶ್ರೀ ಟಿ.ಡಿ. ಮಾರಣ್ಣನವರು ದಿನಾಂಕ ೨೫ನೇ ಏಪ್ರಿಲ್, ೧೯೯೦ ರಂದು ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇನೆ. ಪೂಜ್ಯರು ಎರಡನೇ ವಿಧಾನ ಸಭೆಯ ಸದಸ್ಯರಾಗಿದ್ದರು ಶ್ರೀಯುತರು ಸ್ವಾತಂತ್ರ್ಯ ಹೋರಾಟಗಾರರಾಗಿದ್ದರು, ಕ್ವಿಟ್ ಇಂಡಿಯಾ ಚಳುವಳಿಯಲ್ಲಿ ಸಕ್ರಿಯ ಪಾತ್ರ ವಹಿಸಿದ್ದರು. ಅವರು ಪತ್ರಕರ್ತರಾಗಿಯೂ ಸಹ ಸೇವೆಯನ್ನು ಸಲ್ಲಿಸಿರುತ್ತಾರೆ.

೬. ವಿಧಾನ ಸಭೆಯ ಮಾಜಿ ಸದಸ್ಯರಾದ ಶ್ರೀ ಅನಿವಾಳ ನಂಜಪ್ಪನವರು ದಿನಾಂಕ ೧೦ನೇ ಏಪ್ರಿಲ್, ೧೯೯೦ ರಂದು ನಿಧನರಾದರೆಂದು ತಿಳಿಸಲು ವಿಷಾಧಿಸುತ್ತೇನೆ. ಶ್ರೀಯುತರು ಐದನೇ ವಿಧಾನ ಸಭೆಯ ಸದಸ್ಯರಾಗಿದ್ದರು. ಅವರು ಸ್ವಾತಂತ್ರ್ಯ ಹೋರಾಟಗಾರರಾಗಿ ಹಾಗೂ ಭೂದಾನ ಸಮಿತಿಯ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿರುತ್ತಾರೆ.

† ಶ್ರೀ ವೀರೇಂದ್ರ ಪಾಟೀಲ್,—ಮಾನ್ಯ ಸಭಾಧ್ಯಕ್ಷರೇ, ನಾನು ಈ ಸಭೆಯ ನಾಯಕನಾಗಿ, ದಿವಂಗತ ಹೆಗಡೆ ಮಾಣಿಕ್‌ರಾವ್ ಪಾಟೀಲ್ ಸಂಗಮೇಶ್ವರ ಸರದಾರ, ಪಟೇಲ್ ಪಾಪಾ ನಾಯಕ್, ಮಾರಣ್ಣ ಹಾಗೂ ನಂಜಪ್ಪನವರ ಬಗ್ಗೆ ಶ್ರದ್ಧಾಂಜಲಿ ಅರ್ಪಿಸುವುದು ನನ್ನ ಕರ್ತವ್ಯವೆಂದು ನಾನು ಭಾವಿಸುತ್ತೇನೆ. ಶ್ರೀ ಹೆಗಡೆಯವರು ಕರ್ನಾಟಕದ ಒಬ್ಬ ಸುಪುತ್ರರು ಮತ್ತು ಒಬ್ಬ ಪ್ರತಿಷ್ಠಿತ ವ್ಯಕ್ತಿಯಾಗಿ ಕರ್ನಾಟಕದ ಮತ್ತು ಇಡೀ ರಾಷ್ಟ್ರದ ಸೇವೆ ಮಾಡಿ ನಮ್ಮನ್ನು ಅಗಲಿದ್ದಾರೆ. ಅವರು ಹೆಸರಾಂತ ವಕೀಲರಿದ್ದರು. ವಕೀಲರಾಗಿದ್ದಾಗ ಅವರು ಮೊದಲನೆಯ ಸಲ ನನಗೆ ನೆನಪು ಇದ್ದಾಗ

† ಈ ಚಿಹ್ನೆ ಸಂಬಂಧಪಟ್ಟ ಸದಸ್ಯರು ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

ಲೋಕಸಭಾ ಸದಸ್ಯರಾಗಿದ್ದರು, ಮಂಗಳೂರು ಮದ್ರಾಸ್ ರಾಜ್ಯದಲ್ಲಿದ್ದಾಗ ಪಾರ್ಲಿಮೆಂಟ್ ಸದಸ್ಯರಾಗಿದ್ದರು. ಅನಂತರ ಕರ್ನಾಟಕ ಏಕೀಕರಣ ಆದಮೇಲೆ ಕರ್ನಾಟಕರಾಜ್ಯದ ಹೈಕೋರ್ಟ್‌ನ ಒಬ್ಬ ನ್ಯಾಯಾಧೀಶರಾಗಿ ಕೆಲಸ ಮಾಡಿದ್ದಾರೆ. ತಾವು ಈಗ ಹೇಳಿದಹಾಗೆ ದೆಹಲಿ ಹೈಕೋರ್ಟ್‌ನ ನ್ಯಾಯಾಧೀಶರಾಗಿ, ಸುಪ್ರೀಂ ಕೋರ್ಟ್‌ನ ನ್ಯಾಯಾಧೀಶರಾಗಿ ಲೋಕಸಭೆಯ ಅಧ್ಯಕ್ಷರಾಗಿ ಬಹಳ ನಿಷ್ಪಕ್ಷಪಾತೆಯಿಂದ, ನಿಷ್ಠೆಯಿಂದ ಶ್ರದ್ಧೆಯಿಂದ ಕೆಲಸಮಾಡಿ ತಮ್ಮದೇ ಆದ ಒಂದು ಸ್ಥಾನವನ್ನು ಸಮಾಜದಲ್ಲಿ ಅವರು ಪಡೆದುಕೊಂಡು ಹೋಗಿದ್ದಾರೆ. ಖಂಡತುಂಡವಾಗಿ ಕೇಳುವಂತಹ ಮೈಕ್ಕಿ, ಸಮ್ಮಾರಾಜ್ಯದ ಕೆಲವೇ ಶ್ರೇಷ್ಠ ವ್ಯಕ್ತಿಗಳಲ್ಲಿ ಅವರೂ ಒಬ್ಬರಿದ್ದರು. ಇವತ್ತು ಅವರು ನಮ್ಮನ್ನು ಆಗಲಿದ್ದಾರೆ. ಆದರಿಂದ ಕರ್ನಾಟಕ ರಾಜ್ಯಕ್ಕೆ ಒಂದು ದೊಡ್ಡ ಕೊರತೆ ಉಂಟಾಗಿದೆಯೆಂದು ನಾನು ಭಾವಿಸುತ್ತೇನೆ.

ಆದೇರೀತಿಯಾಗಿ ಶ್ರೀಮಾನ್ ಮಾಣಿಕ್‌ರಾವ್ ಪಾಟೀಲ್ ರವರು, ೧೯೬೮ನೇ ಇಸವಿಯಲ್ಲಿ ನಾನು ಮುಖ್ಯಮಂತ್ರಿಯಾಗಿದ್ದಾಗ ನನ್ನ ಮಂತ್ರಿಮಂಡಲದಲ್ಲಿ ಉಪ-ಮಂತ್ರಿಯಾಗಿ ಕೆಲಸ ಮಾಡಿದರು. ನನ್ನೊಂದಿಗೆ ಸುಮಾರು ಮೂರು ವರ್ಷಗಳಕಾಲ ಕೆಲಸ ಮಾಡುವ ಅವಕಾಶ ಸಿಕ್ಕಿತ್ತು. ನಮ್ಮ ಕಡೆ ಭಾಗ, ಬೀದರ್‌ನ ಔರ ದ್ ತಾಲ್ಲೂಕಿನ ಗಡಿ ಭಾಗದಲ್ಲಿ ಪ್ರಗತಿಯ ಹೆಜ್ಜೆಯಿಟ್ಟು ಕರ್ನಾಟಕಕ್ಕೆ ಸೇವೆಯನ್ನು ಸಾಕಷ್ಟು ಸಲ್ಲಿಸಿದರು. ಅದು ಆದಮೇಲೆ ಅವರಿಗೆ ಮತ್ತೊಂದು ಅವಕಾಶ ಸಿಕ್ಕಿತ್ತು. ಶ್ರೀಮಾನ್ ಗುಂಡೂರಾಯರ ಮಂತ್ರಿಮಂಡಲದಲ್ಲಿ ಕ್ಯಾಬಿನೆಟ್ ಮಂತ್ರಿಯಾಗಿ ಕೆಲಸ ಮಾಡಿದ್ದರು. ಅವರು ಈಗ ನಮ್ಮ ಮಧ್ಯದಲ್ಲಿಲ್ಲ. ಅವರು ಕರ್ನಾಟಕ ರಾಜ್ಯಕ್ಕೆ ಹೈದರಾಬಾದ್ ಕರ್ನಾಟಕ ಭಾಗಕ್ಕೆ ಬೀದರ್ ಜಿಲ್ಲೆಗೆ ಮಾಡಿದಂತಹ ಸೇವೆಯನ್ನು ನಾವು ಸ್ಮರಿಸಿಕೊಳ್ಳಬೇಕಾಗಿದೆ.

ದಿವಂಗತ ಸಂಗಮೇಶ್ವರ ಸರದಾರ್‌ರವರೂ ಸಹ ಮಂತ್ರಿಗಳಾಗಿ ಕೆಲಸ ಮಾಡಿದ್ದಾರೆ. ಬಹಳ ನಿಷ್ಪಕ್ಷಪಾತೆಯಿಂದ ಕೆಲಸ ಮಾಡಿ ಜನಪ್ರೇಮಿಗಳಾಗಿದ್ದರು. ರಾಯಚೂರಿನಲ್ಲಿ ಬಹಳಷ್ಟು ಕೆಲಸ ಮಾಡಿದ್ದಾರೆ. ರಾಯಚೂರು ಜಿಲ್ಲೆಯ ಜನರ ಸೇವೆಯನ್ನು ವಿಶೇಷವಾಗಿ ಮಾಡಿದ್ದಾರೆ. ಅವರು ಇಂದು ನಮ್ಮ ಮಧ್ಯದಲ್ಲಿಲ್ಲ. ಅದೇ ರೀತಿಯಾಗಿ ಮಾಜಿ ಶಾಸಕರುಗಳಾದ ಪಟೇಲ್ ಪಾಪಾನಾಯಕ್, ಟಿ. ಡಿ. ಮಾರೆಣ್ಣ, ಅನಿವಾಳ ನಂಜಪ್ಪ ಇವರು ಶಾಸಕರಾಗಿ ಈ ಮನೆಯಲ್ಲಿ ಕುಳಿತು ಕೆಲಸಮಾಡಿ ತಮ್ಮ ಶಕ್ತಾನುಸಾರವಾಗಿ ಸಮಾಜ ಸೇವೆಯನ್ನು ಮಾಡಿದ್ದಾರೆ. ಈ ಎಲ್ಲಾ ಮಹನೀಯರು ನಮ್ಮನ್ನ ಅಗಲಿ ಹೋಗಿದ್ದಾರೆ ಅದಕ್ಕಾಗಿ ನನ್ನ ಪರವಾಗಿ ಸರ್ಕಾರದ ಪರವಾಗಿ ನನ್ನ ಪಕ್ಷದ ಪರವಾಗಿ ಇಡೀ ಸದನದ ಪರವಾಗಿ ನಾನು ಸಂತಾಪ ಸೂಚಕವನ್ನು ವ್ಯಕ್ತ ಮಾಡುತ್ತಿದ್ದೇನೆ.

† ಶ್ರೀ ಡಿ. ಬಿ. ಚಂದ್ರೇಗೌಡ (ವಿರೋಧಪಕ್ಷದ ನಾಯಕರು).—ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಗಳು ತಮ್ಮ ಸಂತಾಪಸೂಚಕದಲ್ಲಿ ವ್ಯಕ್ತ ಪಡಿಸಿರತಕ್ಕ ಎಲ್ಲಾ ಅಭಿಪ್ರಾಯಗಳಿಗೆ ನಾನೂ ಕೂಡ ಧ್ವನಿಗೂಡಿಸಿ ಒಂದು ಮಾತನ್ನು ನೆನಪುಮಾಡಿಕೊಳ್ಳಬೇಕಾಗಿದೆ ದಿವಂಗತ ಕೆ. ಎಸ್. ಹೆಗಡೆಯವರು ಲೋಕಸಭೆಯ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾಗ ಅಲ್ಲಿ ನಾನು ಸದಸ್ಯನಾಗಿ ಕೆಲಸ ಮಾಡುತ್ತಿದ್ದೆ. ಆ ಸಮಯದಲ್ಲಿ ಅವರು ಲೋಕಸಭೆಯನ್ನು ನಡೆಸಿಕೊಂಡ ರೀತಿ. ಸದಸ್ಯರ ಜೊತೆಗೆ ಇದ್ದ ಸಂಬಂಧ ನಿಜವಾಗಿಯೂ ಅನುಕರಣೀಯ. ನನಗೆ ಶಾಶ್ವತವಾಗಿ ಅವರ ನೆನಪು ಉಳಿಯುವುದಕ್ಕೆ ಮತ್ತೊಂದು ಕಾರಣ ನನ್ನ ಸಂಸತ್ತಿನ ಸದಸ್ಯತ್ವದ ರಾಜೀನಾಮೆಯನ್ನು ಅವರು ಅಂಗೀಕರಿಸಿದ್ದರು. ಬಹಮುಖ್ಯವಾಗಿ ಕೆಲವು ಮೌಲ್ಯಗಳಿಗೆ ತಮ್ಮ ಸ್ಥಾನವನ್ನು ಒತ್ತೆ ಇಟ್ಟವರು ಅವರು. ಸರ್ವೋಚ್ಚ ನ್ಯಾಯಾಲಯದಲ್ಲಿ ಪೌಲ್ಯದ ಪ್ರಶ್ನೆ ಬಂದಾಗ ನ್ಯಾಯಾಧೀಶರ ಹುದ್ದೆಗೆ ರಾಜೀನಾಮೆ ಕೊಟ್ಟಪ್ರಸಂಗ ಭಾರತದಲ್ಲಿ ಭಾರತದ ಇತಿಹಾಸದಲ್ಲಿ ಅತಿವಿರಳವಾದುದು. ಅವರು ಮಹಾನ್ ಮುತ್ಸದ್ದಿ. ಮಾನ್ಯ ಸಭಾನಾಯಕರು ಹೇಳಿದಹಾಗೆ ಕನ್ನಡ ನಾಡಿನ ಸುಪುತ್ರರಾಗಿ ನಾಡುನುಡಿಯ ಬಗ್ಗೆ ಅತ್ಯಂತ ಆತ್ಮೀಯವಾಗಿ ನಡೆದುಕೊಂಡುಂಥ ಶ್ರೇಷ್ಠವಾದುಂಥ ತೀರ್ಪುಗಾರರಾಗಿ, ನ್ಯಾಯಾಧೀಶರಾಗಿ ರಾಷ್ಟ್ರದ ಅತ್ಯುಚ್ಚ ವೇದಿಕೆಯಾದುಂಥ ಲೋಕಸಭೆಯಲ್ಲಿ ಶಾಶ್ವತವಾದ ಕೀರ್ತಿಯನ್ನು ಗಳಿಸಿಕೊಟ್ಟಿದ್ದಾರೆ. ಹಾಗೆಯೇ ಇನ್ನುಳಿದ ಜಿಲ್ಲಾ ಸದಸ್ಯರ ಬಗ್ಗೆ ಸಭಾನಾಯಕರು ವ್ಯಕ್ತ ಮಾಡಿದಂಥ ಅಭಿಪ್ರಾಯಕ್ಕೆ ನಾನೂ ಧ್ವನಿಗೂಡಿಸಿ ಸಂತಾಪವನ್ನು ವ್ಯಕ್ತಪಡಿಸಿ ನನ್ನ ಮಾತುಗಳನ್ನ ಮುಗಿಸುತ್ತೇನೆ.

† ಶ್ರೀ ಬಿ ಎಸ್. ಯಡಿಯೂರಪ್ಪ (ಶಿಕಾರಿಪುರ).—ಸನ್ಮಾನ್ಯ ಅಧ್ಯಕ್ಷರೆ, ಈ ರಾಜ್ಯದ, ಕನ್ನಡದ ಒಬ್ಬ ಸುಪುತ್ರ ಕೆ. ಎಸ್. ಹೆಗಡೆ ಅವರು ಇವತ್ತು ಕಣ್ಮರೆಯಾಗಿದ್ದಾರೆ. ಅವರ ಶವಸಂಸ್ಕಾರ ಕಾರ್ಯಕ್ರಮದಲ್ಲಿ ನಾನೂ ಭಾಗವಹಿಸಿದ್ದೆ. ಆಗ ಸುತ್ತಮುತ್ತಲ ಕಡುಬಡವರು, ಸಾಮಾನ್ಯ ಜನರು ಆ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಲೋಕಸಭಾ ಸದಸ್ಯರಾಗಿ, ಸುಪ್ರೀಂ ಕೋರ್ಟಿನ ನ್ಯಾಯಾಧೀಶರಾಗಿ ಅವರು ಮಾಡಿದ ಸೇವೆ ಗಣನೀಯವಾದುದು. ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳಲೂಬೇಕಾಗಿದೆ. ತತ್ವಕ್ಕಾಗಿ, ನ್ಯಾಯಕ್ಕಾಗಿ ಅವರು ಹೋರಾಟ ಮಾಡಿದ ವ್ಯಕ್ತಿ.

ಸುಪ್ರೀಂ ಕೋರ್ಟಿನ ಮುಖ್ಯ ನ್ಯಾಯಾಧೀಶರ ನೇಮಕ ಮಾಡುವ ಸಂದರ್ಭದಲ್ಲಿ ಸೀನಿಯಾರಿಟಿ ಓವರ್ ಲುಕ್‌ಮಾಡಿದ ಸಂದರ್ಭ ಬಂದಾಗ ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟ್ರೋಥ ವ್ಯಕ್ತಿ ಅವರು. ನಾಳೆ ೬ನೇ ತಾರೀಖು ಮಂಗಳೂರಿನಲ್ಲಿ ದೊಡ್ಡ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಅವರ ಮನೆತನ ದವರು ಇಟ್ಟುಕೊಂಡಿದ್ದಾರೆ. ಅಖಿಲ ಭಾರತೀಯ ಜನತಾ ಪಾರ್ಟಿ ಉಪಾಧ್ಯಕ್ಷರಾಗಿ ಅವರು ಸೇವೆ ಸಲ್ಲಿಸಿದ್ದನ್ನು ನಾವು ಮರೆಯುವುದಕ್ಕೆ ಸಾಧ್ಯವಿಲ್ಲ. ೬ನೇ ತಾರೀಖು ನಡೆಯುವ ಶ್ರದ್ಧಾಂಜಲಿ ಕಾರ್ಯಕ್ರಮಕ್ಕೆ ಅಖಿಲ ಭಾರತೀಯ ಜನತಾ ಪಾರ್ಟಿಯ ಅಧ್ಯಕ್ಷರಾದ ಲಾಲ್‌ಕೃಷ್ಣ ಅಡ್ವಾಣಿ ಅವರು ಕೂಡ ಬರುತ್ತಿದ್ದಾರೆ. ಸರ್ಕಾರದ ಗಮನಕ್ಕೆ ಕಳಕಳಿಯಿಂದ ತರುವ ಪ್ರಯತ್ನ ಏನೆಂದರೆ ಅವರು ಶವಸಂಸ್ಕಾರದ ಸಂದರ್ಭದಲ್ಲಿ ಸರ್ಕಾರದ ಸಕಲ ಮರ್ಯಾದೆಯೊಂದಿಗೆ ಕಾರ್ಯಕ್ರಮ ಮಾಡಿದರಂ. ಆ ಸಂದರ್ಭದಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇಬ್ಬರು ಮಂತ್ರಿಗಳಿದ್ದರು. ಸನ್ಮಾನ್ಯ ಮುಖ್ಯಮಂತ್ರಿ ಗಳು ಯಾರಾದರೂ ಒಬ್ಬ ಸಚಿವರನ್ನು ಶವಸಂಸ್ಕಾರದ ಸಂದರ್ಭದಲ್ಲಿ ಕಳುಹಿಸಿಕೊಟ್ಟಿದ್ದರೆ ನಿಜಕ್ಕೂ ಸಹ ಸರ್ಕಾರದ ಕರ್ತವ್ಯ ಸರಿಯಾಗಿ ಮಾಡಿದಂತಾಗುತ್ತಿತ್ತು. ಅನಿವಾರ್ಯವಾದ ಕಾರಣದಿಂದ ಅದು ಆಗದೇ ಇರಬಹುದು. ಕನ್ನಡ ನಾಡಿನ ಶ್ರೇಷ್ಠ ಸುಪುತ್ರರಲ್ಲಿ ದೈವಾಧೀನರಾದಾಗ ಪಕ್ಷಾತೀತವಾಗಿ ನಾವು ಯೋಚನೆ ಮಾಡುತ್ತಿದ್ದೇವೆ. ತತ್ವಕಾಗಿ, ನ್ಯಾಯಕ್ಕಾಗಿ ಹೋರಾಟ ಮಾಡಿದಂಥ ವ್ಯಕ್ತಿ ಅವರು. ತುರ್ತು ಪರಿಸ್ಥಿತಿ ಕಾಲದಲ್ಲಿ ಪೇಜಾವರ ಶ್ರೀಗಳನ್ನು ಮತ್ತು ಇವರನ್ನು ಅರೆಸ್ಟ್ ಮಾಡುವ ಸಂದರ್ಭ ಬಂದಾಗ ಇವರು ಗಂಟುಮೂಟೆ ಕಟ್ಟಿಕೊಂಡು ರೆಡಿಯಾಗಿದ್ದರು. ಶ್ರೀಮಾನ್ ವೀರೇಂದ್ರ ಪಾಟೀಲರಿಗೂ ಇದೇ ಜ್ಞಾಪಕ ಇರಬಹುದು. ಅವರು ದೈವಾಧೀನರಾದ ಮಾರನೆ ದಿವಸ ಒಂದು ಕಾರ್ಯಕ್ರಮದಲ್ಲಿ ಭಾಗವಹಿಸುವುದು ನಿಶ್ಚಯವಾಗಿತ್ತು. ನಿಜವಾಗಿ ದೊಡ್ಡವರ ಸಾವು.....

ಶ್ರೀ ವೀರೇಂದ್ರ ಪಾಟೀಲ್.—ಅವತ್ತು ಬಹುಶಃ ನಾನಿರಲಿಲ್ಲ. ಆದರೆ ಅವರ ಶವಸಂಸ್ಕಾರ ಪೂರ್ತಿ ಸರ್ಕಾರದ ಗೌರವದೊಂದಿಗೆ ಮಾಡುವುದಕ್ಕೆ ನಾನು ಹೇಳಿದ್ದೆ. ಆ ರೀತಿಯಾಗಿದೆ. ಅದರಲ್ಲಿ ಯಾವ ರೀತಿಯಲ್ಲೂ ಕಡಿಮೆಯಾಗಿಲ್ಲ.

† ಶ್ರೀ ಬಿ. ಎಸ್. ಯಡಿಯೂರಪ್ಪ.—ಸರ್ಕಾರದ ಸಕಲ ಮರ್ಯಾದೆಯಿಂದ ಶವಸಂಸ್ಕಾರ ಆಯಿತು ಎಂದು ನಾನು ಹೇಳಿದೆ, ಸಹಜವಾಗಿ ರಾಜ್ಯದ ಜನತೆ ಅಪೇಕ್ಷೆ ಪಡುವುದೇನೆಂದರೆ ಯಾರಾ ದರೂ ಒಬ್ಬ ಸಚಿವರು ಆ ಸಂದರ್ಭದಲ್ಲಿ ಹಾಜರಿರಬೇಕು ಎಂದು. ನಾಳೆ ೬ನೇ ತಾರೀಖು ಶ್ರದ್ಧಾಂಜಲಿ ಕಾರ್ಯಕ್ರಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಆಗುತ್ತಿದೆ. ಸಾಧ್ಯವಾದರೆ ಆ ಸಮಯದಲ್ಲಿ ಯಾರಾದರೂ ಮಂತ್ರಿಗಳು ಭಾಗವಹಿಸಬೇಕು ಎಂಬುದನ್ನು ಸಭೆಯ ಗಮನಕ್ಕೆ ತರುತ್ತಿದ್ದೇನೆ. ಮಾನ್ಯ ಹೆಗಡೆ ಅವರಲ್ಲದೆ ನಾಡಿಗೆ ಸೇವೆ ಮಾಡಿದ ಇತರ ಅನೇಕರು ಕಣ್ಮರೆಯಾಗಿದ್ದಾರೆ. ಅವರೆಲ್ಲರ ಆತ್ಮಕ್ಕೆ ಶಾಂತಿ ಕೋರುತ್ತಾ, ಭಾರತೀಯ ಜನತಾ ಪಾರ್ಟಿಯ ಪರವಾಗಿ ಮಾನ್ಯ ಹೆಗಡೆಯವರಿಗೆ ಹಾಗೂ ನಿಧನರಾಗಿ ರುವ ಇತರ ಎಲ್ಲರಿಗೆ ಸಂತಾಪವನ್ನು ವ್ಯಕ್ತಪಡಿಸುತ್ತಾ, ಸನ್ಮಾನ್ಯ ಮುಖ್ಯಮಂತ್ರಿಗಳು ಸಂದರ್ಭೋಚಿತವಾಗಿ ಮಾತನಾಡಿರುವುದರಿಂದ ನಾನು ಹೆಚ್ಚು ಮಾತನಾಡುವ ಅಗತ್ಯ ಇಲ್ಲ. ನಾನೂ ಶ್ರದ್ಧಾಂಜಲಿ ಯನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ದಿವಂಗತರ ಆತ್ಮಕ್ಕೆ ಶಾಂತಿ ಕೋರಲು ಒಂದು ನಿಮಿಷ ಎಲ್ಲರೂ ಎದ್ದುನಿಲ್ಲಬೇಕಾಗಿ ವಿನಂತಿ.

(ಸಭೆ ಒಂದು ನಿಮಿಷ ಮೌನವನ್ನಾಚರಿಸಿತು)

ಶ್ರೀ ವಾಟಾಳ್ ನಾಗರಾಜ್.—ಅಧ್ಯಕ್ಷರೇ, ಈಗಾಗಲೇ ನಾನು ತಮ್ಮಲ್ಲಿ ಮನವಿ ಮಾಡಿದೆ...

ಸಭೆಗೆ ನೂತನ ಮಂತ್ರಿಗಳ ಪರಿಚಯ

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸಭಾಧ್ಯಕ್ಷರೇ, ತಮ್ಮ ಅನುಮತಿ ಕೋರಿ ಮಂತ್ರಿ ಮಂಡಲದಲ್ಲಿ ನೂತನವಾಗಿ ನೇಮಕವಾಗಿರುವಂಥ ನನ್ನ ಸಹದ್ಯೋಗಿಗಳ ಪರಿಚಯವನ್ನು ಸದನಕ್ಕೆ ಮಾಡಿಸಿಕೊಡುವುದಕ್ಕೆ ಇಚ್ಛಿಸುತ್ತೇನೆ. ಮೊದಲನೆಯದಾಗಿ ಶ್ರೀ ಎಸ್. ಬಂಗಾರಪ್ಪನವರು, ಎರಡನೆಯವರು ಶ್ರೀ ಎಂ. ವೈ. ಘೋರ್ಪಡೆಯವರು, ಮೂರನೆಯವರು ಶ್ರೀ ಕೆ. ಎಚ್. ಪಾಟೀಲರು ನಾಲ್ಕನೆಯವರು ಶ್ರೀ ಎಸ್. ಎಂ. ಯಾಹ್ಯಾರವರು ಇವರು ಕ್ಯಾಬಿನೇಟ್ ದರ್ಜೆ ಮಂತ್ರಿಗಳು. ಮತ್ತು ರಾಜ್ಯಸಚಿವರು ಶ್ರೀ ಎಂ. ಎಸ್. ಆತ್ಮಾನಂದ, ಡಾ. ಎಚ್. ಆರ್. ರಾಜು ಅವರು. ಡೆಪ್ಯುಟಿ ಮಿನಿಸ್ಟರ್ ಶ್ರೀಮತಿ ಸುಮಾ ವಸಂತ ಅವರು.

(ಸಭೆಗೆ ಪರಿಚಯಿಸಲಾದ ನೂತನ ಮಂತ್ರಿಗಳು ಒಬ್ಬೊಬ್ಬರಾಗಿ ಎದ್ದುನಿಂತು ಸಭೆಗೆ ವಂದಿಸಿದರು)